ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಳಾಸ
ಸಂಪಾದಕ : ಮಂಜು ಬನವಾಸೆ
ಕನ್ನಡ ದಿನಪತ್ರಿಕೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.02 | Issue. 79 | Pages. 2 | Date: 24-02-2026, TUESDAY RNI NO: KARKAN/2024/89601 Kannada Daily
ಸಂಪುಟ : 02 - ಸಂಚಿಕೆ : 79 - ಪುಟಗಳು : 2 24-02-2026 ಮಂಗಳವಾರ Ph: 8762954248 ದರ : ₹1

# ನಿರ್ಲಕ್ಷ್ಯದ ಬುಲೆಟ್ ಸವಾರಿ ತಂದ ಆಪತ್ತು

## ಕೈಗಾರಿಕಾ ವಲಯದಲ್ಲಿ ಭೀಕರ ಅಪಘಾತ | ಯುವತಿ ಸಾವು, ಮತ್ತೊಬ್ಬರ ಸ್ಥಿತಿ ಗಂಭೀರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**





ಹಾಸನ: ವೇಗದ ಚಾಲನೆಯಿಂದ ಬೈಕ್ ಮೇಲಿಂದ ಕೆಳಗೆ ಬಿದ್ದ ಯುವತಿ ಸ್ಥಳದಲ್ಲೇ ಮೃತಪಟ್ಟರೆ ಮತ್ತೊಬ್ಬ ಮಹಿಳೆ ಗಂಭೀರ ಗಾಯಗೊಂಡಿದ್ದಾರೆ.

ನಗರದ ಕೈಗಾರಿಕಾ ಪ್ರದೇಶಾಭಿವೃದ್ಧಿ ವೃತ್ತದಿಂದ ಹನುಮಂತರ ನಡುವೆ ಭಾನುವಾರ ಸಂಜೆ ಘಟನೆ ನಡೆದಿದ್ದು, ಸತ್ಯಮಂಗಲ ಬಡಾವಣೆಯ ಪ್ರಿಯ (23) ಮೃತರು. ಮತ್ತೋರ್ವ ಯುವತಿ ಸ್ವಾತಿ (24) ಸ್ಥಿತಿ ಚಿಂತಾಜನಕವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳು ಸ್ವಾತಿ ಕಳೆದ ನವೆಂಬರ್‌ನಲ್ಲಷ್ಟೇ ಮದುವೆ ಆಗಿದ್ದರು. ಪ್ರಿಯ ನಗರದ ಖಾಸಗಿ ಕಾಲೇಜಿನಲ್ಲಿ ಎಂಸಿಎ ಅಂತಿಮ ವರ್ಷ ಓದುತ್ತಿದ್ದಳು. ಇಬ್ಬರೂ ಹೆಲ್ಮೆಟ್ ಧರಿಸದೆ ಬುಲೆಟ್ ಬೈಕಲ್ಲಿ ಜಾಲಿ ರೈಡ್ ಮಾಡುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಅವೈಜ್ಞಾನಿಕವಾಗಿ ನಿರ್ಮಿಸಲಾದ ಸ್ಪೀಡ್ ಬ್ರೇಕರ್ ಗಮನಿಸದೆ ಬ್ರೇಕ್ ಹಾಕಿದ್ದರಿಂದ ನಿಯಂತ್ರಣ ತಪ್ಪಿ ಬೈಕ್ ಬಿದ್ದಿದೆ.

ಪ್ರಿಯ ಭವಿಷ್ಯದಲ್ಲಿ ತನ್ನದೇ ಕನಸು ಹೊಂದಿದ್ದಳು. ರಸ್ತೆ ಮಧ್ಯದಲ್ಲಿದ್ದ ಹಂಪ್ ಸ್ಪಷ್ಟವಾಗಿ ಕಾಣಿಸದೇ ಇದ್ದುದರಿಂದ ಈ ದುರಂತ ಸಂಭವಿಸಿದೆ ಎಂದು ತಿಳಿದುಬಂದಿದೆ. ವಿದ್ಯಾರ್ಥಿನಿಯ ಅಕಾಲಿಕ ನಿಧನದಿಂದ ಕುಟುಂಬದವರಲ್ಲಿ ದುಃಖದ ವಾತಾವರಣ ಆವರಿಸಿದೆ.

ಈ ಕುರಿತು ಮಾತನಾಡಿರುವ ಸ್ಥಳೀಯರು, ರಸ್ತೆಗೆ ನಿರ್ಮಿಸಿದ್ದ ಸ್ಪೀಡ್ ಬ್ರೇಕರ್‌ಗೆ ಯಾವುದೇ ಮುನ್ನೆಚ್ಚರಿಕಾ ಸೂಚನೆ ಹಾಕಿರಲಿಲ್ಲ, ಹಂಪ್ ಮೇಲೆ ಬಿಳಿ ಬಣ್ಣದ ಪಟ್ಟಿ ಹಾಕಿರಲಿಲ್ಲ. ರಾತ್ರಿ ವೇಳೆ ಬೆಳಕಿನ ಕೊರತೆಯಿಂದ ಹಂಪ್ ಕಾಣಿಸದೇ ಅಪಘಾತ ಸಂಭವಿಸಿದೆ ಎಂದು ದೂರಿದರು.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂತಹ ಅನೇಕ ಅವೈಜ್ಞಾನಿಕ ಹಂಪ್ಸ್ ಹಾಕಲಾಗಿದ್ದು, ಪ್ರಯಾಣಿಕರು, ಅದರಲ್ಲೂ ಬೈಕ್ ಸವಾರರು ಆತಂಕದಿಂದ ಸಂಚರಿಸುವಂತಾಗಿದೆ ಎಂದು ಆರೋಪಿಸಿದರು.

ಕೆಲವಯ ಕಡೆಗಳಲ್ಲಿ ಹಂಪ್‌ಗಳಿಗೆ ಬಿಳಿ ಪಟ್ಟಿ ಹಾಕಿದ್ದರೂ, ನಿರಂತರ ವಾಹನ ಸಂಚಾರದಿಂದ ಸಂಪೂರ್ಣ ಅಳಿಸಿ ಹೋಗಿದೆ. ಹೊಸದಾಗಿ ಬಣ್ಣ ಬಳಿಯವ ಪ್ರಯತ್ನ ಯಾರೂ ಮಾಡಿಲ್ಲ. ಸೂಚನಾ ಫಲಕ ಅಳವಡಿಸಿಲ್ಲ. ಇದೇ ದುರಂತಕ್ಕೆ ಕಾರಣ ಎಂದರು.

ಕಾನೂನಿನ ಪ್ರಕಾರ ಸ್ಪೀಡ್ ಬ್ರೇಕರ್‌ಗಳಿಗೆ ರಾತ್ರಿ ಹೊತ್ತಿನಲ್ಲಿ ಸ್ಪಷ್ಟವಾಗಿ ಕಾಣುವ ಬಣ್ಣದ ಗುರುತು ಇರಬೇಕು. ಆದರೆ ನಗರದಲ್ಲಿ ಬಹುತೇಕ ಕಡೆ ಯಾವುದೇ ಸೂಚನೆ ಇಲ್ಲ. ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಹಲವು ಪ್ರಮುಖ ರಸ್ತೆಗಳಲ್ಲಿ ಅವೈಜ್ಞಾನಿಕ ಹಂಪ್‌ಗಳಿರುವ ಬಗ್ಗೆ ಸಾರ್ವಜನಿಕರು ಹಲವು ಬಾರಿ ದೂರು ನೀಡಿದ್ದರೂ, ಶಾಶ್ವತ ಪರಿಹಾರ ಕಂಡುಬಂದಿಲ್ಲ. ಶಾಲೆ-ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು ಹಾಗೂ ನಿತ್ಯ ಸಂಚರಿಸುವ ಜನರಿಗೆ ಇದು ದೊಡ್ಡ ಅಪಾಯವಾಗಿದೆ. ಇನ್ನಾದರೂ ಸಂಬಂಧಪಟ್ಟವರು ಎಚ್ಚೆತ್ತುಕೊಳ್ಳಬೇಕು ಎಂದು ಮನವಿ ಮಾಡಿದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಪ್ರಿಯ ತಂದೆ ಬಿಎಸ್ಎಫ್ ಯೋಧ

ಮೃತ ಪ್ರಿಯ ಅವರ ತಂದೆ ಪ್ರಕಾಶ್ ಬಿಎಸ್‌ಎಫ್ ಯೋಧರಾಗಿದ್ದು ಜೋಧಪುರ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸತ್ಯಮಂಗಲ ಬಡಾವಣೆಯ ನಿವಾಸದಲ್ಲಿ ತಾಯಿ, ಸಹೋದರಿ ಜೊತೆಗೆ ಪ್ರಿಯ ಇದ್ದಳು. ಭಾನುವಾರ ಸ್ನೇಹಿತೆ ಸ್ವಾತಿ ಕರೆದಿದ್ದಕ್ಕೆ ತನ್ನ ಸ್ಕೂಟಿಯಲ್ಲಿ ಬಂದಿದ್ದ ಆಕೆ ಬಿ.ಕಾಟಿಹಳ್ಳಿಯಲ್ಲಿ ನಿಲ್ಲಿಸಿ ಬುಲೆಟ್ ಏರಿದ್ದಳು. ನಂತರ ನಡೆದಿದ್ದು ಮಾತ್ರ ದುರಂತ.

# ಜಿಲ್ಲಾಧಿಕಾರಿ ಭವನ ಕಾಮಗಾರಿ ವೆಚ್ಚ ಏರಿಕೆಗೆ ಸಚಿವರ ಆಕ್ಷೇಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನೂತನ ಜಿಲ್ಲಾಧಿಕಾರಿ ಕಚೇರಿ ಕಟ್ಟಡ ನಿರ್ಮಾಣಕ್ಕೆ ಸರ್ಕಾರವು ರೂ.10 ಕೋಟಿಗೆ ಮಾತ್ರ ಆದೇಶ ನೀಡಿದ್ದರೂ, ಕಾಮಗಾರಿ ಒಟ್ಟು ವೆಚ್ಚ 55 ಕೋಟಿ ರೂ.ಗೆ ಏರಿಕೆಯಾಗಿರುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಆಕ್ಷೇಪ ವ್ಯಕ್ತಪಡಿಸಿದರು.

ಬೆಂಗಳೂರಿನ ಕಚೇರಿಯಲ್ಲಿ ಸೋಮವಾರ ಸಭೆ ನಡೆಸಿದ ಅವರು, ಸರ್ಕಾರವು ಜಿ+1 ಕಟ್ಟಡಕ್ಕೆ ಮಾತ್ರ ಅನುಮತಿ ನೀಡಿದ್ದರೂ, ಕ್ಯಾಬಿನೆಟ್ ಒಪ್ಪಿಗೆ ಪಡೆಯದೆ ಕಟ್ಟಡವನ್ನು ಜಿ +3 ಆಗಿ ವಿಸ್ತರಿಸಿರುವ ಬಗ್ಗೆ ಸಚಿವರು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಮೂಲ ಆದೇಶದಲ್ಲಿ ಮೊದಲ ಹಾಗೂ ಎರಡನೇ ಹಂತದ ಕಾಮಗಾರಿಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲದಿದ್ದರೂ, ಈಗ ಹಂತಹಂತವಾಗಿ ಕಾಮಗಾರಿ ನಡೆಸಿ ಹೆಚ್ಚುವರಿ ಹಣಕ್ಕಾಗಿ ಬೇಡಿಕೆ ಇಡಲಾಗುತ್ತಿರುವುದು ಪ್ರಶ್ನಾರ್ಥಕವಾಗಿದೆ. ಇದೀಗ ಎರಡನೇ ಹಂತದ ಕಾಮಗಾರಿಗೆ20 ಕೋಟಿ ರೂ. ವೆಚ್ಚವಾಗಿರುವುದಾಗಿ ತಿಳಿಸಲಾಯಿತು. ಮೂಲ ಪ್ಲಾನ್‌ನಲ್ಲಿ 110 ಪಿಲ್ಲರ್‌ಗಳಿಗೆ ಮಾತ್ರ ಅವಕಾಶವಿದ್ದರೂ, ಈಗ 220 ಪಿಲ್ಲರ್‌ಗಳನ್ನು ನಿರ್ಮಿಸಿರುವ ಬಗ್ಗೆ ಸಚಿವರು ಅಷ್ಟೊಂದು ಪಿಲ್ಲರ್ ಏಕೆ ಎಂದು ಪ್ರಶ್ನಿಸಿದರು.

ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗೆ 6.97 ಕೋಟಿ ರೂ. ಬಿಲ್ ಪಾವತಿಸಬೇಕಿದ್ದು, ಹೆಚ್ಚುವರಿಯಾಗಿ 18 ಕೋಟಿ ರೂ. ಹಣವನ್ನು ಕಂದಾಯ ಇಲಾಖೆಯಿಂದ ಕೇಳಲಾಗಿದೆ. ಈ ಹಿನ್ನೆಲೆಯಲ್ಲಿ ಮುಂದಿನ ವಾರ ತಾಂತ್ರಿಕ ತಂಡದೊಂದಿಗೆ ಮತ್ತೊಮ್ಮೆ ಸ್ಥಳ ಪರಿಶೀಲನೆ ನಡೆಸುವಂತೆ ಸೂಚನೆ ನೀಡಲಾಗಿದೆ. ಪರಿಶೀಲನೆಯ ಬಳಿಕ ಇನ್ನಷ್ಟು ಎಷ್ಟು ಹಣ ಅಗತ್ಯವಿದೆ ಎಂಬುದನ್ನು ತಿಳಿಸಿದರೆ ಬಿಡುಗಡೆಗೆ ಸಮ್ಮತಿ ಸೂಚಿಸಲಾಗುವುದು ಎಂದು ಸಚಿವರು ಹೇಳಿದರು. ಕಟ್ಟಡ ಕಾಮಗಾರಿಗೆ ವೇಗ ನೀಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ಸಭೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ವಲಯ ಆಯುಕ್ತ ಆದಿತ್ಯ ಆಮ್ಲಾನ್ ಬಿಶ್ವಾಸ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಮುಖ್ಯ ಇಂಜಿನಿಯರ್ ಇತರರಿದ್ದರು.

# ಅರಸೀಕೆರೆಯಲ್ಲಿ ಬಸವ ಪ್ರತಿಮೆ ನಿರ್ಮಾಣ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಮುಂದಿನ ಬಸವ ಜಯಂತಿಯೊಳಗೆ ನಗರದ ಪಿಪಿ ವೃತ್ತದ ಬಳಿ ಕಂಚಿನ ಅಶ್ವರೂಢ ಬಸವೇಶ್ವರರ ಪುತ್ಥಳಿ ಲೋಕಾರ್ಪಣೆ ಮಾಡಲಾಗುವುದು ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ಸೋಮವಾರ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಸೇರಿದಂತೆ ಬಸವ ಅನುಯಾಯಿಗಳ ಒಡಗೂಡಿ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣದ ರಸ್ತೆಗೆ ಹೊಂದಿಕೊಂಡಂತೆ ಬಸವೇಶ್ವರ ಪ್ರತಿಮೆ ಸ್ಥಾಪನೆ ಸಂಬಂಧ ಸ್ಥಳ ನಿಗದಿಪಡಿಸಿದ ಬಳಿಕ ಮಾತನಾಡಿದರು.

ಮಹಾ ಮಾನವತಾವಾದಿ ಬಸವಣ್ಣ ಅವರ ವಚನಗಳು ನಮ್ಮೆಲ್ಲರಿಗೂ ದಾರಿದೀಪವಾಗಿದೆ. ಬಸವಣ್ಣ ಅವರ ಪ್ರತಿಮೆ ಸ್ಥಾಪನೆ ಜೊತೆಗೆ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಬಸ್ ನಿಲ್ದಾಣಕ್ಕೂ ಸಹ ಬಸವಣ್ಣ ಅವರ ಹೆಸರನ್ನು ಇಡಲಾಗುವುದು ಎಂದು ಘೋಷಿಸಿದರು.

ಬೆಂಗಳೂರು ಹಾಗೂ ಬಸವ ಕಲ್ಯಾಣದಲ್ಲಿ ಇರುವಂತೆಯೇ ಕಂಚಿನ ಬೃಹತ್ ಗಾತ್ರದ ಅಶ್ವಾರೂಢ ಬಸವಣ್ಣವರ ಪ್ರತಿಮೆ ಸ್ಥಾಪನೆಗೆ ಈಗಾಗಲೇ 40 ಲಕ್ಷ ರೂ. ಅನುದಾನವನ್ನ ರಾಜ್ಯ ಸರ್ಕಾರ ನೀಡಿದೆ.

ಬಸವಣ್ಣನ ಅನುಯಾಯಿಗಳು, ನಾವು ಸಹ ಪ್ರತಿಮೆ ನಿರ್ಮಾಣಕ್ಕೆ ಕೈಜೋಡಿಸುತ್ತೇವೆ ಎಂದು ಮುಂದೆ ಬಂದಿರುವುದರಿಂದ ಅವರ ತನು ಮನ ಧನ ಸಹಕಾರದ ಜೊತೆಗೆ ಇನ್ನೂ ಅಗತ್ಯ ಎನಿಸಿದರೆ ಹೆಚ್ಚುವರಿ ಅನುದಾನವನ್ನೂ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ಬರುವುದಾಗಿ ಭರವಸೆ ನೀಡಿದರು.

ವೀರಶೈವ ಲಿಂಗಾಯತ ಸಮಾಜದ ಮುಖಂಡ ಗಂಜಿಗೆರೆ ಚಂದ್ರಶೇಖರ್ ಮಾತನಾಡಿ, ತಾಲೂಕಿನ ಜನತೆಯ ದಶಕಗಳ ಕನಸು ಶಾಸಕರ ಇಚ್ಛಾಶಕ್ತಿಯಿಂದಾಗಿ ಇಂದು ಸಾಕಾರ ರೂಪ ಗೊಳ್ಳುತ್ತಿದೆ. ಬಸವಣ್ಣನವರ ಪ್ರತಿಮೆ ಸ್ಥಾಪನೆಗೆ ಈಗ ನಿಗದಿಪಡಿಸುತ್ತಿರುವ ಸ್ಥಳ ಸೂಕ್ತವಾಗಿದ್ದು, ರೈಲು ಮತ್ತು ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರುವುದರಿಂದ ಈ ಭಾಗದಲ್ಲಿ ಸಂಚರಿಸುವವರಿಗೆ ಜಗಜ್ಯೋತಿ ಬಸವೇಶ್ವರರ ದರ್ಶನ ಭಾಗ್ಯ ದೊರೆಯುವಂತಾಗುತ್ತಿರುವುದು ಸಂತಸದ ವಿಷಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಜಿ.ಬಿ.ಶಶಿಧರ್, ಹೇಮಾವತಿ ಸಕ್ಕರೆ ಕಾರ್ಖಾನೆ ನಿರ್ದೇಶಕ ಮಲ್ಲೇನಹಳ್ಳಿ ಶಿವಶಂಕರ ಸ್ವಾಮಿ, ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ, ಕಾಟಿಕೆರೆ ಉಮೇಶ್, ಮುರುಂಡಿ ಶಿವಯ್ಯ, ದಿವಾಕರ್, ಮಂಜಣ್ಣ ಇತರರಿದದರು.

# ಹಾಸನದಲ್ಲಿ ಗೊರೂರು ನಾಟಕ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನೂರು ವರ್ಷಗಳ ಹಿಂದೆ ಇದ್ದ ಪರಿಸ್ಥಿತಿ ಈಗ ಇರುವ ಪರಿಸ್ಥಿತಿ ಎರಡನ್ನೂ ಪಕ್ಕಪಕ್ಕ ಇಟ್ಟು ನೋಡುವ ಪ್ರಯತ್ನ ಗೊರೂರು ನಾಟಕದ್ದಾಗಿದೆ. ನೂರು ವರ್ಷಗಳ ಹಿಂದೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ ಅನುಭವಗಳನ್ನು ಅವರು ಕಡ ಊರಿನ ಕಥೆಯನ್ನು ಹೇಳಿದ್ದೇವೆ ಎಂದು ಮೈಸೂರಿನ ನಿರಂತರ ತಂಡದ ಎಂ.ಎಂ. ಸುಗುಣ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಉಲಿವಾಲ ಸ್ಕೂಲ್ ಆಫ್ ಡ್ರಾಮ ಹಾಗೂ ಏಕತಾರಿ ಸಾಂಸ್ಕೃತಿಕ ಸಂಸ್ಥೆ ಏರ್ಪಡಿಸಿದ್ದ ಗೊರೂರು ನಾಟಕದ ಕಾರ್ಯಕ್ರಮ ಉದ್ಘಾಟನೆ ಏರ್ಪಡಿಸಿ ಮಾತನಾಡಿದರು.

ಪತ್ರಕರ್ತೆ ಲೀಲಾವತಿ ಮಾತನಾಡಿ, ಗೊರೂರು ಅವರ ವ್ಯಕ್ತಿತ್ವ ಅತ್ಯಂತ ಪ್ರೇರಣಾದಾಯಕವಾದದ್ದು ಎಂದರು.

ಪತ್ರಕರ್ತ ರವಿನಾಕಲಗೂಡು ಮಾತನಾಡಿ ಹಾಸನದಲ್ಲಿ ರಂಗಾಭಿರುಚಿ ಮೂಡಿಸುತ್ತಿರುವ ಚಲಂ ಹಾಡ್ಲಹಳ್ಳಿ ಹಾಗು ಚಿನ್ನೇನಹಳ್ಳಿ ಸ್ವಾಮಿಯವರ ಪ್ರಯತ್ನ ಶ್ಲಾಘನೀಯವಾದ್ದು ಎಂದರು.

ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀನಿವಾಸ್ ಅವರು ಗೊರೂರು ರೀತಿಯ ನಾಟಕಗಳು ಹೆಚ್ಚೆಚ್ಚು ಪ್ರಯೋಗಗೊಳ್ಳಬೇಕು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನಮ್ಮ ಜಿಲ್ಲೆಯ ಹೆಮ್ಮೆ . ಅವರ ಕೃತಿಗಳನ್ನು ಮತ್ತು ಅವರ ಚಿಂತನೆಗಳನ್ನು ನಾವು ಸಾಕಷ್ಟು ಅಧ್ಯಯನ ಮಾಡಬೇಕಿರುವ ಅವಶ್ಯಕತೆ ಈಗ ಹೆಚ್ಚಾಗಿದೆ ಎಂದು ಕಂಚಮಾರನಹಳ್ಳಿ ಕಾಂತ ಅವರು ಅಭಿಪ್ರಾಯ ಪಟ್ಟರು.

ಸಾಹಿತಿ ಚಿನ್ನೇನಹಳ್ಳಿ ಸ್ವಾಮಿ ಮಾತನಾಡಿ, ರಂಗ ಸಂಘಟನೆ ನಾಟಕದ ವಿಚಾರದಲ್ಲಿ ಅತ್ಯಂತ ಮುಖ್ಯ ಪಾತ್ರ ವಹಿಸುತ್ತದೆ. ಮೈಸೂರಿನ ಗೆಳೆಯರು ನಮ್ಮನ್ನು ಸಂಪರ್ಕಿಸಿದಾಗ ಇದು ನಮ್ಮ ಜವಬ್ದಾರಿ ಹಾಗು ಕರ್ತವ್ಯ ಎಂದು ಭಾವಿಸಿ ಸಂಘಟನೆ ಮಾಡಿದೆವು ಎಂದರು.

ವೇದಿಕೆಯಲ್ಲಿ ಸಮಾಜಸೇವಕಿ ಮಮತಾಶಿವು, ಸಾಹಿತಿ ಸ ವೆಂ ಪೂರ್ಣಿಮಾ, ಉಲಿವಾಲ ಮೋಹನ್ ಕುಮಾರ್ ಮತ್ತಿತತರು ಹಾಜರಿದ್ದರು.

# ಎಂಸಿಇ ಕಾಲೇಜಿನಲ್ಲಿ ಮಾ. 2ರಿಂದ ಆನಂದದ ಅನುಭೂತಿ ಶಿಬಿರ





**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮಲೆನಾಡು ತಾಂತ್ರಿಕ ಕಾಲೇಜು ಸಭಾಂಗಣದಲ್ಲಿ ಮಾ. 2 ರಿಂದ 7ರ ವರೆಗೆ ಆನಂದದ ಅನುಭೂತಿ ಶಿಬಿರ ಆಯೋಜಿಸಲಾಗಿದೆ ಎಂದು ಆರ್ಟ್ ಆಫ್ ಲಿವಿಂಗ್ ಜಿಲ್ಲಾ ಅಭಿವೃದ್ಧಿ ಸಮಿತಿ ಸದಸ್ಯ ಸಿ.ಆರ್ .ಪರಮೇಶ್ವರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಯೋಗ, ಧ್ಯಾನ, ಪ್ರಾಣಾಯಾಮ, ಸುದರ್ಶನ ಕ್ರಿಯೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಆರ್ಟ್ ಆಫ್ ಲಿವಿಂಗ್ ಮತ್ತು ಲಯನ್ಸ್ ಕ್ಲಬ್ ವತಿಯಿಂದ ಶಿಬಿರ ಆಯೋಜಿಸಲಾಗಿದೆ. ಒಟ್ಟು ಮೂರು ವಿಭಾಗವಾಗಿ ಶಿಬಿರ ನಡೆಯಲಿದೆ. ಬೆಳಿಗ್ಗೆ 5.30 ರಿಂದ 8ರ ವರೆಗೆ ಒಂದು, ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30ರ ವರೆಗೆ ಹಾಗು ಸಂಜೆ 6 ರಿಂದ 8.30ರ ವರೆಗೆ ಬ್ಯಾಚ್ ಮಾಡಲಾಗಿದೆ ಎಂದರು.

ಈಗಾಗಲೇ 192 ದೇಶಗಳಲ್ಲಿ 80 ಕೋಟಿಗೂ ಹೆಚ್ಚು ಜನರು ಶಿಬಿರದ ಪ್ರಯೋಜನ ಪಡೆದಿದ್ದಾರೆ. ಯೋಗ, ಪ್ರಾಣಾಯಾಮದಿಂದ ಹಂತ ಹಂತವಾಗಿ ಆರೋಗ್ಯದಲ್ಲಿ ಸುಧಾರಣೆ ಕಂಡುಕೊಳ್ಳಬಹುದು. ಶಿಬಿರದಲ್ಲಿ ಪಾಲ್ಗೊಳ್ಳಲು ಬಯಸುವವರು ಮೊ.ಸಂ. 9845173779, 9110256623 ಇಲ್ಲಿಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದರು.. ಯೋಗ ಶಿಕ್ಷಕ ಜಿ.ಎ.ಸುಬ್ಬುಕೃಷ್ಣ, ಲಯನ್ಸ್ ಕ್ಲಬ್ ವಲಯಾಧ್ಯಕ್ಷ ಹೆಚ್.ಕೆ.ನಾಗೇಶ್, ಸಿ.ಶಿವಸ್ವಾಮಿ, ಹೆಚ್. ವೇದಶ್ರೀ, ಬಿ.ಆರ್.ಚನ್ನಬಸಪ್ಪ, ರಮೇಶ್ ಜಾಲಹಳ್ಳಿ ಇದ್ದರು.

# ಕ್ರಿಕೆಟ್ ಸಂಭ್ರಮಾಚರಣೆ ವೇಳೆ ಚಾಕುವಿನಿಂದ ಇರಿತ



ಸಕಲೇಶಪುರ: ಕ್ರಿಕೆಟ್ ಪಂದ್ಯಾವಳಿಯ ವಿಜಯೋತ್ಸವ ವೇಳೆ ಮಾತಿಗೆ ಮಾತು ಬೆಳೆದು ಯುವಕನಿಗೆ ಚಾಕುವಿನಿಂದ ಇರಿದ ಘಟನೆ ತಾಲೂಕಿನ ಬಾಗೆ ಗ್ರಾಮದಲ್ಲಿ ನಡೆದಿದೆ.

ಬಾಗೆ ಗ್ರಾಮದ ಅಶೋಕ (27) ಎಂಬ ಯುವಕ ಇರಿತಕ್ಕೆ ಒಳಗಾಗಿದ್ದು, ಅದೇ ಗ್ರಾಮದ ಮಣಿಕಂಠ (36) ಎಂಬಾತ ಆರೋಪಿ. ಗ್ರಾಮದಲ್ಲಿ ನಡೆದ ಕ್ರಿಕೆಟ್ ಪಂದ್ಯಾವಳಿಯನ್ನು ವೀಕ್ಷಿಸಲು ಮಣಿಕಂಠ ಸ್ಥಳಕ್ಕೆ ಬಂದಿದ್ದನು. ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ಅಶೋಕ ಊರಿಗೆ ಬಂದು ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದನು.

ಫೈನಲ್ ಪಂದ್ಯದಲ್ಲಿ ಅಶೋಕ ಪ್ರತಿನಿಧಿಸಿದ್ದ ತಂಡ ಪ್ರಥಮ ಸ್ಥಾನ ಪಡೆದ ಹಿನ್ನೆಲೆ ತಂಡದ ಸದಸ್ಯರು ಗ್ರಾಮದಲ್ಲಿ ವಿಜಯೋತ್ಸವ ಆಚರಿಸುತ್ತಿದ್ದರು. ಈ ವೇಳೆ ಸ್ಥಳಕ್ಕೆ ಬಂದ ಮಣಿಕಂಠ ಮಾತಿನ ಚಕಮಕಿ ನಡೆಸಿದ್ದು, ಪರಿಸ್ಥಿತಿ ಉದ್ವಿಗ್ನಗೊಂಡಿದೆ ಎನ್ನಲಾಗಿದೆ. ಬಳಿಕ ಆಟಗಾರರು ವಿಜಯೋತ್ಸವದ ಅಂಗವಾಗಿ ಉಪಹಾರ ಸೇವಿಸಲು ತೆರಳಿದ್ದರು. ಉಪಹಾರ ಮುಗಿಸಿ ಹಿಂದಿರುಗುತ್ತಿದ್ದ ವೇಳೆ ಪೂರ್ವ ವೈಮನಸ್ಸನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಣಿಕಂಠ ಏಕಾಏಕಿ ಅಶೋಕನ ಹೊಟ್ಟೆ ಭಾಗಕ್ಕೆ ಚೂರಿಯಿಂದ ಇರಿದಿದ್ದಾನೆ ಎಂದು ತಿಳಿದುಬಂದಿದೆ. ಗಂಭೀರವಾಗಿ ಗಾಯಗೊಂಡ ಅಶೋಕನನ್ನು ತಕ್ಷಣ ಹಾಸನ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳದಲ್ಲಿದ್ದ ಸ್ಥಳೀಯರು ಆರೋಪಿಯನ್ನು ಹಿಡಿದು ಹಿಗ್ಗಾಮುಗ್ಗಾ ಹೊಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ.

# ಬೇಸಿಗೆ ಮುಗಿಯುವ ವರೆಗೆ ವಿದ್ಯುತ್ ಕಡಿತ ಬೇಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಬೇಸಿಗೆ ಅವಧಿ ಮುಗಿಯುವ ವರೆಗೂ ತಾಲೂಕು ವ್ಯಾಪ್ತಿಯಲ್ಲಿ ವಿದ್ಯುತ್ ಸಮಸ್ಯೆಯಾಗದಂತೆ ಗಮನಹರಿಸಬೇಕು ಎಂದು ಶಾಸಕ ಸಿ.ಎನ್ .ಬಾಲಕೃಷ್ಣ ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಸೆಸ್ಕ್ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿ, ತ್ರಿ ಫೇಸ್ ಲೈನ್ ಇದ್ದಾಗ ಎಲ್‌ಸಿ ತೆಗೆದುಕೊಳ್ಳಬಾರದು. ಕಳೆದ 3 ವರ್ಷಗಳಿಂದ ತಾಲೂಕು ವ್ಯಾಪ್ತಿಯ ಬಹುತೇಕ ಕೆರೆ-ಕಟ್ಟೆಗಳಿಗೆ ಏತ ನೀರಾವರಿ ಯೋಜನೆಯಡಿ ನೀರು ತುಂಬಿಸುತ್ತಿರುವ ಪರಿಣಾಮ ವ್ಯಾಪ್ತಿಯಲ್ಲಿ ಅಂತರ್ಜಲ ಚೇತರಿಕೆ ಕಂಡಿದೆ. ಅದರಿಂದ ಕೊಳವೆ ಬಾವಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿದ್ದು ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂದರು. ಬೇಸಿಗೆ ಬಿಸಿಲಿನ ತಾಪಮಾನ ಏರಿಕೆಯಾಗಿರುವುದರಿಂದ ಬೆಳೆಗಳಿಗೆ ಸಮಯಕ್ಕೆ ಸರಿಯಾಗಿ ನೀರಿನ ನೀಡುವುದು ಅಗತ್ಯವಿರುತ್ತದೆ. ವಿದ್ಯುತ್ ಅಭಾವ ಎದುರಾದರೆ ಬೆಳೆಗಳಿಗೆ ತೊಂದರೆಯಾಗಲಿದೆ ಎಂದು ತಿಳಿಸಿದರು.

ತಾಲೂಕಿನ ಶೇ.40 ರಷ್ಟು ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ ಇದೆ.

ದಯವಿಟ್ಟು ಅವುಗಳನ್ನು ಬಗೆಹರಿಸುವಂತಹ ಗಮನ ಹರಿಸಬೇಕು. ರೈತರ ಬೆಳೆಗಳಿಗೆ, ಜನ-ಜಾನುವಾರುಗಳ ಕುಡಿಯುವ ನೀರಿಗೆ ಹಾಗೂ ಮಕ್ಕಳ ಓದಿನ ಸಲುವಾಗಿ ಅಗತ್ಯವಾಗಿ ವಿದ್ಯುತ್ ಪೂರೈಕೆ ಮಾಡಬೇಕು. ಯಾವುದೇ ಸಮಸ್ಯೆಗಳು ಕಂಡುಬಂದರು ತಕ್ಷಣ ಸರಿಪಡಿಸಿ ವಿದ್ಯುತ್ ಪೂರೈಕೆ ಮಾಡಬೇಕು ಎಂದರು. ಜಿಲ್ಲೆಯಲ್ಲಿಯೇ ಚನ್ನರಾಯಪಟ್ಟಣ ತಾಲೂಕು ಹೆಚ್ಚು ಕೊಳವೆ ಬಾವಿಗಳನ್ನು ಹೊಂದಿದೆ. ವಿದ್ಯುತ್ ಪರಿವರ್ತಕಗಳು (ಟಿಸಿ) ಸುಟ್ಟರೆ ಸಾಧ್ಯವಾದಷ್ಟು ಬೇಗ ಒದಗಿಸಬೇಕು. ವಿದ್ಯುತ್ ಪರಿವರ್ತಕದ ಸಲುವಾಗಿ ರೈತರನ್ನು ಅಲೆದಾಡಿಸಬೇಡಿ. ರೈತರೊಂದಿಗೆ ಗೌರವದಿಂದ ವರ್ತಿಸಿ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಭೈರಾಪುರ, ಸಾತೇನಹಳ್ಳಿ ಹಾಗೂ ಹಾರೋಸೋಮನಹಳ್ಳಿ ಸೇರಿ ವಿವಿಧ ಗ್ರಾಮಗಳ ರೈತರು ತಮ್ಮ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳನ್ನು ಕುರಿತು ಶಾಸಕರಿಗೆ ಹಲವು ದೂರು ನೀಡಿದರು.

ಭೈರಾಪುರ ಗ್ರಾಮದ ರೈತ ಕೃಷ್ಣೇಗೌಡ ಮಾತನಾಡಿ, ಸಂಜೆ 6 ಗಂಟೆಯಿಂದ ಬೆಳಗಿನ ಜಾವದ ವರೆಗೂ ಅಗತ್ಯವಾಗಿ ವಿದ್ಯುತ್ ಪೂರೈಕೆ ಮಾಡಬೇಕು. ಸಂಜೆ ಸುಮಾರಿನಿಂದಲೇ ಗ್ರಾಮೀಣ ಪ್ರದೇಶದಲ್ಲಿ ಚಿರತೆಗಳ ಕಾಟ ಪ್ರಾರಂಭವಾಗಲಿದೆ. ದಯವಿಟ್ಟು ರಾತ್ರಿಯಿಡಿ ವಿದ್ಯುತ್ ಪೂರೈಕೆ ಮಾಡುವುದು ಸೂಕ್ತ ಎಂದು ಅಳಲು ತೋಡಿಕೊಂಡರು.

ಶಾಸಕರು ಸ್ಥಳದಿಂದಲೇ ಮೇಲಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಕರೆ ಮಾಡಿ ರೈತರ ಸಮಸ್ಯೆಗಳನ್ನು ಶೀಘ್ರದಲ್ಲಿಯೇ ಬಗೆಹರಿಸಬೇಕು ಎಂದು ಸೂಚನೆ ನೀಡಿದರು. ಕಾರ್ಯನಿರ್ವಾಹಕ ಇಂಜಿನಿಯರ್ ಆರ್.ರತ್ನ ಮಾತನಾಡಿ, ಈಗಾಗಲೇ ಅರ್ಜಿ ನೀಡಿರುವ ರೈತರಿಗೆ ಎಸ್ಟಿಮೇಶನ್ ಸಿದ್ಧಪಡಿಸಿ ವಿದ್ಯುತ್ ಪರಿವರ್ತಕಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸುವ ಕೆಲಸ ಮಾಡಲಾಗುತ್ತಿದೆ. ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಮಕ್ಕಳ ಶೈಕ್ಷಣಿಕ ವ್ಯವಸ್ಥೆಯ ಸಲುವಾಗಿ ವಿದ್ಯುತ್ ತೊಂದರೆಯಾಗದಂತೆ ವ್ಯಾಪ್ತಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ಪ್ರಮುಖರಾದ ಬಸವರಾಜ್, ಎಇ ಎನ್. ಆರ್.ಹರೀಶ್, ಎಇಇಗಳಾದ ವಜ್ರಕುಮಾರ್, ಕೃಷ್ಣ, ವಿಶಾಲ ಇತರರಿದ್ದರು.

# ಮನೆ ಕಳವಿಗೆ ಯತ್ನಿಸಿದ ಅಂತಾರಾಜ್ಯ ಕಳ್ಳನ ಬಂಧನ

ಚನ್ನರಾಯಪಟ್ಟಣ: ಮನೆ ಕಳ್ಳತನಕ್ಕೆ ಬಂದಿದ್ದ ಕಿಡಿಗೇಡಿಗಳು ಕುಟುಂಬಸ್ಥರು ಕೂಗಾಡಿದ್ದಕ್ಕೆ ಓಡಿ ಹೋಗಲು ಯತ್ನಿಸಿದ್ದು, ಒಬ್ಬನನ್ನು ಸಾರ್ವಜನಿಕರು ಹಿಡಿದು ಥಳಿಸಿರುವ ಘಟನೆ ಪಟ್ಟಣದ ಗಾಂಧಿ ವೃತ್ತದ ಮನೆಯೊಂದರಲ್ಲಿ ನಡೆದಿದೆ. ಪಟ್ಟಣದ ಸಂತೋಷ್ ಎಂಬುವವರ ಮನೆಯಲ್ಲಿ ಶನಿವಾರ ರಾತ್ರಿ ಘಟನೆ ನಡೆದಿದೆ. ಇಟಿಎಸ್ ಕಾರಿನಲ್ಲಿ ಐವರು ಬಂದಿದ್ದು ಆಯುಧದಿಂದ ಎರಡು ಬಾಗಿಲುಗಳನ್ನು ಮುರಿದು ಒಳನುಗ್ಗಿದ್ದಾರೆ. ಜೋರು ಶಬ್ದವಾಗುತ್ತಿರುವುದನ್ನು ಅರಿತ ಸಂತೋಷ್ ಅವರ ಪತ್ನಿ ತಮ್ಮ ಮೊಬೈಲ್ ಸಿಸಿ ಕ್ಯಾಮರಾದಲ್ಲಿ ಕಳ್ಳರು ಒಳನುಗ್ಗಿರುವುದನ್ನು ಗಮನಿಸಿ ಕೂಡಲೇ ಪತಿ ಸಂತೋಷ್ ಮತ್ತು ಮಗ ಸುಹಾಸ್‌ಗೆ ತಿಳಿಸಿದಾಗ ಅವರು ಮನೆಯ ಹತ್ತಿರ ಬಂದು ಕೂಗಾಡಿದಾಗ ಕಳ್ಳರು ಮನೆ ಹಿಂಭಾಗದ ಕಾಂಪೌಂಡ್ ಹಾರಿ ಓಡಿ ಹೋಗಲು ಪ್ರಯತ್ನಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಜಮಾಯಿಸಿದ ಸ್ಥಳೀಯರು ಒಬ್ಬನನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಬಂಧಿತ ಆರೋಪಿಯನ್ನು ಮುಂಬೈನ ಶಕೀರ್ ಅಹ್ಮದ್ ಎಂದು ಗುರುತಿಸಲಾಗಿದೆ.

# ಲಾಭ ನಂಬಿ ನಷ್ಟಕ್ಕೀಡಾದ ಹಸಿರುವಾಣಿ ವ್ಯಾಪಾರಿಗಳು

## ಕಾಫಿ ಬಿಟ್ಟು ಕಾಳು ಮೆಣಸಿನತ್ತ ಚಿತ್ತ | ಹಾಕಿದ ಬಂಡವಾಳವೂ ವಾಪಸ್ ಇಲ್ಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳೆದ ವರ್ಷ ಕಾಫಿಗೆ ಬಂಪರ್ ಬೆಲೆ ದೊರೆತಿದ್ದರಿಂದ ಬಂಡವಾಳ ಹೂಡಿದ್ದ ಹಸಿರುವಾಣಿ ವ್ಯಾಪಾರಿಗಳು ಪ್ರಸಕ್ತ ದಿನಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೆಲೆ ಇಲ್ಲದೆ ನಷ್ಟದ ಅಪಾಯಕ್ಕೆ ಸಿಲುಕಿದ್ದು ಕಾಫಿ ಬಿಟ್ಟು ಕಾಳು ಮೆಣಸಿನತ್ತ ಗಮನ ಹರಿಸಿದ್ದಾರೆ.

ಕಾಫಿ ತೋಟಗಳಲ್ಲಿ ಫಸಲು ಇರುವಾಗಲೇ ಬೆಲೆ ನಿಗದಿಪಡಿಸಿ ಖರೀದಿಸುವುದು. ನಂತರ ಅದನ್ನು ಕೊಯ್ಲು ಮಾಡಿಕೊಂಡು ಲಾಭ ಮಾಡಿಕೊಳ್ಳುವುದು ಹಸಿರುವಾಣಿಯ ಉದ್ದೇಶ. ಬೆಳೆ ಹಸಿರಾಗಿದ್ದಾಗಲೇ ವ್ಯಾಪಾರ ಮಾಡುವ ಪ್ರವೃತ್ತಿಗೆ ಹಸಿರುವಾಣಿ ಎನ್ನಲಾಗುತ್ತದೆ. ಕಳೆದ ಐದಾರು ವರ್ಷಗಳಿಂದ ಹಾಸನ, ಚಿಕ್ಕಮಗಳೂರು, ಕೊಡಗು ಭಾಗದಲ್ಲಿ ಈ ಪದ್ಧತಿ ಚಾಲ್ತಿಗೆ ಬಂದಿದೆ. ಆರಂಭದಲ್ಲಿ ಈ ರೀತಿಯ ವ್ಯಾಪಾರದಲ್ಲಿ ತೊಡಗುವವರ ಸಂಖ್ಯೆ ಕಡಿಮೆ ಇತ್ತಾದರೂ ಇತ್ತೀಚೆಗೆ ಅಧಿಕ ಪ್ರಮಾಣದ ವ್ಯಾಪಾರಿಗಳು ಹುಟ್ಟಿಕೊಂಡಿದ್ದರು. ಕಳೆದ ವರ್ಷ ಕಾಫಿ ಕೊಯ್ಲು ನಡೆಸುವ ವೇಳೆ 12 ಸಾವಿರ ರೂ. ಬೆಲೆ ಇದ್ದ ಕಾರಣ ಈ ವರ್ಷವೂ ಅದೇ ಬೆಲೆ ಸಿಗಬಹುದು ಅಥವಾ ಹೆಚ್ಚಾಗಬಹುದೆಂದು ಭಾವಿಸಿ ಹಸಿರುವಾಣಿ ಪಡೆದಿದ್ದ ವ್ಯಾಪಾರಿಗಳಿಗೆ ಸದ್ಯದ ಬೆಲೆ ಇಳಿಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಸಾಮಾನ್ಯವಾಗಿ ಕಳೆದ ವರ್ಷ ಪಡೆದ ಕಾಫಿ ತೋಟಗಳನ್ನೇ ಪ್ರತಿವರ್ಷ ಕೆಲವು ಹಸಿರುವಾಣಿ ವ್ಯಾಪಾರಿಗಳು ಪಡೆಯುತ್ತಿದ್ದು ಕಳೆದ ವರ್ಷದ ಬೆಲೆ, ಇಳುವರಿ ಹಾಗೂ ಔಟ್‌ಟನ್ ಲೆಕ್ಕಾಚಾರದಲ್ಲಿ ಬೆಲೆ ನಿಗದಿಯಾಗುತ್ತಿದೆ. ಆದರೆ, ಈ ಔಟ್‌ಟನ್ ಭಾರೀ ಪ್ರಮಾಣದಲ್ಲಿ ಕುಸಿದಿದ್ದರೆ ಬೆಲೆ ಕಳೆದ ಎರಡು ವರ್ಷಕ್ಕೆ ಕುಸಿತಗೊಂಡಿದೆ. ಅಲ್ಲದೆ ಇಳುವರಿ ಬಹುತೇಕ ಕಾಫಿ ಬೆಳೆಗಾರರಿಗೆ ಶೇ. 20 ರಿಂದ 40 ರಷ್ಟು ಕುಸಿದಿದೆ. ಅದರಿಂದ ಬಂಡವಾಳ ಹಾಕಿ ಲಾಭದ ನಿರೀಕ್ಷೆಯಲ್ಲಿದ್ದ ಬೆಳೆಗಾರರಿಗೆ ನಷ್ಟದ ಭೀತಿ ಎದುರಾಗಿದ್ದು ಕೊಯ್ಲು ನಡೆಸಿರುವ ಸಾಕಷ್ಟು ಹಸಿರುವಾಣಿ ವ್ಯಾಪಾರಿಗಳು ತಮ್ಮ ಉತ್ಪನ್ನವನ್ನು ಮಾರಾಟ ಮಾಡದೆ ಬೆಲೆ ಏರಿಕೆಯ ನಿರೀಕ್ಷೆಯಲ್ಲಿ ದಾಸ್ತಾನಿಟ್ಟುಕೊಂಡಿದ್ದಾರೆ.



### ಬೆಲೆ ಏರಿಳಿತ ವ್ಯಾಪಾರಿ ಕಂಗಾಲು

2023ರಲ್ಲಿ 6 ರಿಂದ 12 ಸಾವಿರ ರೂ. ತಲುಪಿದ್ದ 50 ಕೆ.ಜಿ. ರೋಬಸ್ಟಾ ಕಾಫಿ ಬೆಲೆ 2024ರಲ್ಲಿ 8 ರಿಂದ 13 ಸಾವಿರ ಗಡಿ ತಲುಪಿತ್ತು. 2025ರಲ್ಲಿ 10 ರಿಂದ 12 ಸಾವಿರ ರೂ. ಸನಿಹದಲ್ಲಿ ಮಾರುಕಟ್ಟೆ ದರ ಪ್ರಸ್ತುತ 10 ಸಾವಿರ ರೂ. ಆಸುಪಾಸಿನಲ್ಲಿದೆ. ಪ್ರತಿ 50 ಕೆ.ಜಿ. ರೋಬಸ್ಟಾ ಕಾಫಿ ಧಾರಣೆ 8 ಸಾವಿರದಿಂದ 10 ಸಾವಿರ ರೂ. ಒಳಗೆ ಇರುವುದರಿಂದ ವ್ಯಾಪಾರಿಗಳು ನಷ್ಟದ ಭೀತಿಯಲ್ಲಿದ್ದಾರೆ. ಹೀಗಾಗಿ ಕಾಫಿ ಬದಲಿಗೆ ಕಾಳು ಮೆಣಸಿನ ಹಸಿರುವಾಣಿ ವ್ಯಾಪಾರದಲ್ಲಿ ಬಹುತೇಕರು ತೊಡಗಿಸಿಕೊಂಡಿದ್ದಾರೆ. ಅದರಿಂದಾಗಿ ಕಾಫಿ ಹಸಿರುವಾಣಿಯಲ್ಲಿ ಉಂಟಾಗುತ್ತಿದ್ದ ನಷ್ಟದಿಂದ ತಪ್ಪಿಸಿಕೊಂಡಿದ್ದಾರೆ.

### ಕಾಳು ಮೆಣಸು ಕೆ.ಜಿ.ಗೆ 700 ರೂ.

ಕಾಳು ಮೆಣಸಿನ ಬೆಲೆ 2024 ರ ನಂತರ ಸ್ಥಿರವಾಗಿದೆ. 2023 ಹಾಗು 2024ರ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ. ಕಾಳು ಮೆಣಸಿನ ಧಾರಣೆ 400 ರಿಂದ 700 ರೂ. ಸನಿಹಕ್ಕೆ ತಲುಪಿದ್ದಲ್ಲದೆ ಸಾವಿರ ರೂ.ಗೆ ತಲುಪಲಿದೆ ಎಂಬ ಮಾತು ಕೇಳಿ ಬರುತ್ತಿತ್ತು. ಅದರಿಂದಾಗಿ ಹಲವು ವ್ಯಾಪಾರಿಗಳು 700 ರೂ.ನಂತೆ ಖರೀದಿಸಿ ಶೇಖರಿಸಿಟ್ಟಿದ್ದರು. ಆದರೆ, 2024 ಮೆಣಸು ಕೊಯ್ಲು ಆರಂಭವಾಗುವ ವೇಳೆಗೆ ಮೆಣಸಿನ ಧಾರಣೆ ಕುಸಿತಗೊಂಡು 500 ರೂ. ಸನಿಹಕ್ಕೆ ಬಂದಿತ್ತು. ಪ್ರಸ್ತುತ 700 ರೂ. ಆಸುಪಾಸಿನಲ್ಲಿ ಬೆಲೆ ನಿಗದಿಯಾಗಿದ್ದು ಹಸಿರುವಾಣಿ ವ್ಯಾಪಾರಿಗಳಿಗೆ ಆತಂಕ ದೂರವಾಗಿದೆ.

# ನಾಗರಿಕರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ನಾಗರಿಕರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ ಕಾಲ ಕಾಲಕ್ಕೆ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳಬೇಕೆಂದು ಸಂಸದ ಶ್ರೇಯಸ್ ಪಟೇಲ್ ಸಲಹೆ ನೀಡಿದರು.

ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ನಗರದ ನಿವೃತ್ತ ಶಿಕ್ಷಕ ಗಂಗಾಧರಸ್ವಾಮಿ ಅವರ 5ನೇ ವರ್ಷದ ಪುಣ್ಯ ಸ್ಮರಣೆ ಪ್ರಯುಕ್ತ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಡಿ. ಶೆಟ್ಟಿ ಕುಟುಂಬಸ್ಥರು ಹಾಗೂ ಅಗರ್ವಾಲ್ ಕಣ್ಣಿನ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಕಣ್ಣಿನ ಉಚಿತ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಕಣ್ಣು ದೇಹದ ಪ್ರಮುಖ ಅಂಗ. ನೇತ್ರವನ್ನು ರಕ್ಷಿಸಲು ಪೂರಕವಾಗಿ ಈ ಶಿಬಿರವನ್ನು ಆಯೋಜಿಸಿರುವುದು ಹೆಮ್ಮೆಯ ವಿಷಯ. ಅದರ ಸದುಪಯೋಗವನ್ನು ಪಡೆದುಕೊಳ್ಳುವುದರ ಮೂಲಕ ನೇತ್ರ ರಕ್ಷಿಸಿಕೊಳ್ಳಬೇಕೆಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ.ಲಕ್ಷ್ಮಣ ಮಾತನಾಡಿ, ಬಿ.ಆರ್. ಅಂಬೇಡ್ಕರ್ ನಗರದ ಡಿ.ಶೆಟ್ಟಿ ಕುಟುಂಬಸ್ಥರು ಹಲವು ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತವಾಗಿ ಜನಸಾಮಾನ್ಯರಿಗೆ ನೆರವಾಗುವಂತಹ ತಪಾಸಣಾ ಶಿಬಿರ ನಡೆಸಲು ಮುಂದಾಗಿರುವುದು ಖುಷಿಯ ಸಂಗತಿ. ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವುದರ ಮೂಲಕ ಜನಸ್ನೇಹಿಯಾಗಿ ಸೇವೆ ಸಲ್ಲಿಸಲು ಸದಾ ಮುಂದಾಗಬೇಕೆಂದು ಮನವಿ ಮಾಡಿದರು.

ಪುರಸಭೆ ಮಾಜಿ ಸದಸ್ಯೆ, ನಾಗರತ್ನ ಸದಾಶಿವ, ನಿವೃತ್ತ ಸೈನಿಕ ಮಂಜುನಾಥ್, ಎಸ್‌ಬಿಐನ ಮಂಜುನಾಥ್, ಶಿಕ್ಷಣ ಇಲಾಖೆಯ ನರಸಿಂಹಮೂರ್ತಿ ಮತ್ತಿತರರಿದ್ದರು.

# ಜೇನುಕಲ್ ಸಿದ್ದೇಶ್ವರ ಬೆಟ್ಟದಲ್ಲಿ ಪ್ಲಾಸ್ಟಿಕ್ ಹಾವಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲ್ಲೂಕಿನ ಸುಪ್ರಸಿದ್ಧ ಜೇನುಕಲ್ ಸಿದ್ದೇಶ್ವರ ಬೆಟ್ಟದಲ್ಲಿ ಪ್ಲಾಸ್ಟಿಕ್ ಹಾವಳಿ ಮಿತಿ ಮೀರಿದ್ದು ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ.

ಸಿದ್ದೇಶ್ವರ ಸ್ವಾಮಿ ದರ್ಶನಕ್ಕೆ ನಿತ್ಯ ಸಾವಿರಾರು ಭಕ್ತರು ಬರುತ್ತಾರೆ. ಜಿಲ್ಲೆ ಮಾತ್ರವಲ್ಲದೆ ಹೊರ ಜಿಲ್ಲೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಬರುವುದರಿಂದ ಇಲ್ಲಿ ಸ್ವಚ್ಛತೆ ಕಾಪಾಡಬೇಕಿದ್ದ



ಸ್ಥಳೀಯ ಆಡಳಿತ ಸಂಪೂರ್ಣ ಮೈಮರೆತಿದೆ. ಎಲ್ಲೆಂದರಲ್ಲಿ ಲೆಕ್ಕಕ್ಕೆ ಸಿಗದಷ್ಟು ನೀರಿನ ಬಾಟಲಿ, ಚಿಪ್ಸ್ ಪ್ಯಾಕೆಟ್ ಹಾಗೂ ಕಸದ ಕವರ್‌ಗಳು ಬಿದ್ದಿರುವುದು ಕಂಡುಬರುತ್ತಿದೆ. ಬೆಟ್ಟದ ಇಳಿಜಾರುಗಳಲ್ಲಿ ರಾಶಿ ಬಿದ್ದಿರುವ ತ್ಯಾಜ್ಯದಿಂದ ಪರಿಸರ ಹಾಳಾಗುತ್ತಿದೆ. ಮೂಕ ಪ್ರಾಣಿಗಳ ಜೀವಕ್ಕೂ ಪ್ಲಾಸ್ಟಿಕ್ ಮಾಲಿನ್ಯ ಕುತ್ತು ತರುತ್ತಿದೆ. ದೇವಸ್ಥಾನಕ್ಕೆ ಕೋಟ್ಯಾಂತರ ರೂಪಾಯಿ ಆದಾಯ ಹರಿದು ಬರುತ್ತಿದ್ದರೂ, ಕಸ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ಇಲ್ಲದಿರುವುದು ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಡಸ್ಟ್‌ಬಿನ್‌ಗಳ ಕೊರತೆ ಹಾಗು ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸಿದೆ.

ಸ್ವಚ್ಛತಾ ಕಾರ್ಯ ಕೈಗೊಳ್ಳದಿರುವುದರಿಂದ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಆಡಳಿತ ಮಂಡಳಿಯ ವಿರುದ್ಧ ಸಾರ್ವಜನಿಕರ ಆಕ್ರೋಶ ಹೆಚ್ಚಾಗಿದೆ. ಪ್ಲಾಸ್ಟಿಕ್ ಮುಕ್ತವಾಗಲಿ ಪವಿತ್ರ ಕ್ಷೇತ್ರ ಎಂಬ ಘೋಷಣೆ ಮೊಳಗಿಸುತ್ತಿರುವ ಭಕ್ತರು, ತಕ್ಷಣವೇ ಸ್ವಚ್ಛತಾ ಕಾರ್ಯಾಚರಣೆ ಕೈಗೊಂಡು ಶಾಶ್ವತ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಜಾರಿಗೆ ತರಬೇಕೆಂದು ತಾಲ್ಲೂಕು ಆಡಳಿತವನ್ನು ಒತ್ತಾಯಿಸಿದ್ದಾರೆ.

# ನವಿಲೆ ನಾಗೇಶ್ವರಸ್ವಾಮಿ ದೇವಾಲಯ ಅಭಿವೃದ್ಧಿಗೆ ಮನವಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನುಗ್ಗೇಹಳ್ಳಿ: ನವಿಲೆ ಶ್ರೀ ನಾಗೇಶ್ವರಸ್ವಾಮಿ ದೇವಾಲಯ ಪುಣ್ಯಕ್ಷೇತ್ರವಾಗಿ ಖ್ಯಾತಿ ಪಡೆದಿದ್ದು, ದೇವಾಲಯದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಸಹಕಾರ ನೀಡಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಕೋರಿದರು.

ಹೋಬಳಿಯ ನವಿಲೆ ಗ್ರಾಮದಲ್ಲಿ ಭಾನುವಾರ ಏರ್ಪಡಿಸಿದ್ದ ಶ್ರೀ ನಾಗೇಶ್ವರಸ್ವಾಮಿ ಹಾಗು ಶ್ರೀ ಕೆಂಪಮ್ಮದೇವಿ ನೂತನ ರಥ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಮುಜರಾಯಿ ಇಲಾಖೆ, ಗ್ರಾಮಸ್ಥರು, ಎಲ್ಲಾ ಪಕ್ಷದ ಮುಖಂಡರು ಹಾಗು ಉದ್ಯಮಿಗಳ ಸಹಕಾರದಿಂದ 90 ಲಕ್ಷ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣಗೊಂಡಿದೆ ಎಂದರು.

ರಥ ನಿರ್ಮಾಣಕ್ಕೆ ಸರ್ಕಾರದಿಂದ 20 ಲಕ್ಷ ರೂ. ಅನುದಾನ ನೀಡಲಾಗಿದೆ. ವೈಯಕ್ತಿಕವಾಗಿ 5 ಲಕ್ಷ ರೂ. ಸಹಾಯ ಮಾಡಿದ್ದೇನೆ. ಉದ್ಯಮಿಗಳಾದ ಅಣತಿ ಯೋಗೇಶ್ 2 ಲಕ್ಷ ರೂ. ಹಾಗೂ ಮರುವನಹಳ್ಳಿ ದೇವರಾಜ್ 1 ಲಕ್ಷ ರೂ. ದೇಣಿಗೆ ನೀಡಿದ್ದಾರೆ ಎಂದರು.

ದೇವಾಲಯದಲ್ಲಿ ಪ್ರತಿದಿನ ಭಕ್ತರಿಗೆ ಅನ್ನದಾಸೋಹ ನಡೆಯುತ್ತಿದ್ದು, ದೇವಾಲಯದ ಬ್ಯಾಂಕ್ ಖಾತೆಯಲ್ಲಿ 4 ಕೋಟಿ ರೂ. ಹಣವಿದೆ. ಈ ಹಣವನ್ನು ನಾಗೇಶ್ವರಸ್ವಾಮಿ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಬಳಸಲಾಗುವುದು. ದೇವಾಲಯ ಮುಂಭಾಗ ರಾಜಗೋಪುರ ಹಾಗೂ ರಥದ ಮನೆ ನಿರ್ಮಾಣಕ್ಕೆ ಮುಂಬರುವ ದಿನಗಳಲ್ಲಿ ಅನುದಾನ ಒದಗಿಸಲಾಗುವುದೆಂದು ಹೇಳಿದರು. ತಿಪಟೂರು ತಾಲ್ಲೂಕಿನ ಕೆರಗೋಡಿ-ರಂಗಾಪುರ ಸುಕ್ಷೇತ್ರ ಮಠದ ಗುರು ಪರದೇಶಿ ಕೇಂದ್ರ ಸ್ವಾಮೀಜಿ ಮಾತನಾಡಿ, ಕ್ಷೇತ್ರಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸರ್ಪ ಸಂಸ್ಕಾರ, ಆಶ್ಲೇಷ ಬಲಿ ಪೂಜೆ ಸೇರಿ ಸರ್ಪದೋಷ ನಿವಾರಣೆಗೆ ವಿಶೇಷ ಪೂಜೆಗಳು ನಡೆಯುತ್ತವೆ.

ಚರ್ಮ ರೋಗಗಳಿಗೆ ಈ ಕ್ಷೇತ್ರದಲ್ಲಿ ಪೂಜೆ ಮಾಡಿದರೆ ಫಲ ದೊರೆಯುತ್ತದೆಂಬ ನಂಬಿಕೆಯಿದೆ ಎಂದರು. ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ತಾವು ಚನ್ನರಾಯಪಟ್ಟಣ ತಹಶೀಲ್ದಾರ್, ಉಪವಿಭಾಗಾಧಿಕಾರಿಯಾಗಿದ್ದಾಗ ದೇವಾಲಯ ಅಭಿವೃದ್ಧಿಗೆ ಆದ್ಯತೆ ನೀಡಲಾಗಿತ್ತು. ಅಂದಿನ ತಹಶೀಲ್ದಾರ್ ವರಪ್ರಸಾದ್ ರೆಡ್ಡಿ ಅವರ ಮುತುವರ್ಜಿಯಿಂದ ಅನ್ನದಾಸೋಹ ಮಂಟಪ ನಿರ್ಮಾಣವಾಗಿದೆ. ದಾನಿಗಳ ಸಹಕಾರದಿಂದ ಭೂಮಿ ಖರೀದಿಸಲಾಗಿತ್ತು. ಅದೇ ಜಾಗದಲ್ಲಿ ಈಗ ಕಲ್ಯಾಣ ಮಂಟಪ ನಿರ್ಮಾಣವಾಗುತ್ತಿದೆಯೆಂದರು.

# ನಿರಂತರ ಸಭೆಯಿಂದ ಅಭಿವೃದ್ಧಿ ಕುಂಠಿತ: ಶಾಸಕ ರೇವಣ್ಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ನಿರಂತರವಾಗಿ ಅಧಿಕಾರಿಗಳ ಸಭೆ ನಡೆಸುತ್ತಿರುವುದರಿಂದ ಗ್ರಾಮೀಣ ಭಾಗದಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಈ ಸಂಬಂಧ ಪತ್ರ ಬರೆಯುತ್ತೇನೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಕಚೇರಿಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪದೇ ಪದೇ ಅಧಿಕಾರಿಗಳ ಸಭೆ ನಡೆಸುತ್ತಿರುವುದರಿಂದ ಸಾರ್ವಜನಿಕರು, ರೈತರು ಹಾಗೂ ಬಡವರ ಕೆಲಸಗಳಿಗೆ ವಿಳಂಬವಾಗುತ್ತಿದೆ. ಹಳ್ಳಿಮೈಸೂರು ಸರ್ವೆ ನಂ. 31/31ಕ್ಕೆ ಸಂಬಂಧಿಸಿದ ಭೂ ವಿವಾದ ವಿಚಾರವನ್ನು ಪ್ರಸ್ತಾಪಿಸಿದ ಅವರು, ನಾಲ್ಕು ದಶಕಗಳಿಂದ ಉಳುಮೆ ಮಾಡುತ್ತಿರುವ ವ್ಯಕ್ತಿಗೆ ತೊಂದರೆ ನೀಡಲಾಗುತ್ತಿದೆ. ತಹಶೀಲ್ದಾರ್ ಜೊತೆ ಚರ್ಚಿಸಿ ಭೂಮಾಲೀಕನಿಗೆ ನ್ಯಾಯ ಒದಗಿಸಬೇಕೆಂದು ಸೂಚಿಸಿದರು.

40 ವರ್ಷಗಳಿಂದ ಉಳುಮೆ ಮಾಡುತ್ತಿರುವ ಜಮೀನಿನ ಮಾಲೀಕರ ವಿರುದ್ಧ ದಾಖಲೆ ಇಲ್ಲದ ವ್ಯಕ್ತಿಯೊಬ್ಬ ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಿಸಿ ಜಮೀನಿಗೆ ಹೋಗಬಾರದೆಂದು ಹೇಳುವ ಅಧಿಕಾರ ಪೊಲೀಸ್ ಅಧಿಕಾರಿಗೆ ಇದೆಯೇ ಎಂದು ಪ್ರಶ್ನಿಸಿದರು. ಮಾ. 3ರಂದು ನಡೆಯಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ ಜರುಗಲಿದೆ. ಈ ಬಾರಿ ಗ್ರಹಣ ಇರುವ ಹಿನ್ನಲೆಯಲ್ಲಿ ದೇವಾಲಯ ಮಧ್ಯಾಹ್ನ 1 ರಿಂದ ಸಂಜೆ 6ರ ವರೆಗೆ ಮುಚ್ಚಲಿದೆ. ಸಂಜೆ 6 ರಿಂದ ರಾತ್ರಿ 12ರ ವರೆಗೆ ಮಾತ್ರ ದರ್ಶನ ಹಾಗು ಪ್ರಸಾದ ವ್ಯವಸ್ಥೆ ಇರಲಿದೆಯೆಂದು ತಿಳಿಸಿದರು.

ಈ ವರ್ಷ ಗ್ರಹಣ ಇರುವುದರಿಂದ ಹೊಸ ಬಟ್ಟೆ ಹಾಕಲು ಸಾಧ್ಯವಿಲ್ಲ. ಮುಂದಿನ ವರ್ಷ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಹೊಸ ಬಟ್ಟೆ ಹಾಕಲಾಗುವುದು. ಅವಕಾಶ ಕೆಲವರಿಗೆ ಮಾತ್ರ ಸೀಮಿತವಾಗದೆ ಎಲ್ಲರಿಗೂ ದೊರಕಬೇಕೆಂದರು.

ತಹಶೀಲ್ದಾರ್ ವೈ.ಎಂ. ರೇಣುಕುಮಾರ್ ಮಾತನಾಡಿ, ರಥೋತ್ಸವಕ್ಕೆ ಯಾರು ಬೇಕಾದರೂ ಧನಸಹಾಯ ಮಾಡಬಹುದು. ಸಂಗ್ರಹವಾಗುವ ನಿಧಿಯಿಂದ ಪ್ರಸಾದ ಹಾಗು ಇತರ ವ್ಯವಸ್ಥೆ ಮಾಡಿಕೊಳ್ಳಬಹುದು ಎಂದರು.

ಸಭೆಯಲ್ಲಿ ವೃತ್ತ ನಿರೀಕ್ಷಕ ಸಂತೋಷ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್ ರಾಮರಾಜು, ಪುರಸಭೆ ಮುಖ್ಯಾಧಿಕಾರಿ ಶಿವಶಂಕರ್ ಮತ್ತಿತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಫೆಬ್ರವರಿ-24

1821: ಮೆಕ್ಸಿಕೋ ಸ್ವಾತಂತ್ರ್ಯ ಘೋಷಣೆ, ದೇಶದಲ್ಲಿ ಪ್ಲಾನ್ ಆಫ್ ಇಗುಯಾಲಾ ಘೋಷಣೆಯಾಗಿ, ಸ್ಪೇನ್ ಆಳ್ವಿಕೆಯಿಂದ ಮುಕ್ತವಾಗುವ ದಾರಿಯು ತೆರೆಯಿತು.

1920: ನಾಜಿ ಪಕ್ಷದ ಸ್ಥಾಪನೆ, ಅಡಾಲ್ಫ್ ಹಿಟ್ಲರ್ ನೇತೃತ್ವದಲ್ಲಿ ಜರ್ಮನಿಯಲ್ಲಿ ನಾಜಿ ಪಕ್ಷ ತನ್ನ 25 ಅಂಶಗಳ ಕಾರ್ಯಕ್ರಮ ಪ್ರಕಟಿಸಿತು. ಇದು ಮುಂದೆ ವಿಶ್ವ ರಾಜಕೀಯದ ಮೇಲೆ ದೊಡ್ಡ ಪರಿಣಾಮ ಬೀರಿತು.

1948: ಎಸ್ಟೋನಿಯಾ ಸ್ವಾತಂತ್ರ್ಯ ದಿನ, ತನ್ನ ಸ್ವಾತಂತ್ರ್ಯ ದಿನವನ್ನು ಫೆ. 24ರಂದು ಆಚರಿಸುತ್ತದೆ. 1918ರಲ್ಲಿ ಇದೇ ದಿನ ಸ್ವಾತಂತ್ರ್ಯ ಘೋಷಿಸಲಾಯಿತು.

1961: ಭಾರತದಲ್ಲಿ ಮೊದಲ ಪರೀಕ್ಷಾತ್ಮಕ ವಿಮಾನ ಅಪಘಾತ ತನಿಖೆ ವರದಿ ಸಂಬಂಧಿತ ವಿಮಾನ ದುರಂತಗಳ ತನಿಖೆಗೆ ಸಂಬಂಧಿಸಿದ ಪ್ರಕ್ರಿಯೆಗಳು ಈ ಕಾಲದಲ್ಲಿ ಗಂಭೀರವಾಗಿ ರೂಪುಗೊಂಡವು.

2010: ಸಚಿನ್ ತೆಂಡೂಲ್ಕರ್‌ರ ಐತಿಹಾಸಿಕ ಸಾಧನೆ, ದಕ್ಷಿಣ ಆಫ್ರಿಕಾ ವಿರುದ್ಧ ಗ್ವಾಲಿಯರ್‌ನಲ್ಲಿ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 200 ರನ್ ಗಳಿಸಿ, ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ದ್ವಿಶತಕ ಬಾರಿಸಿದ ಮೊದಲ ಆಟಗಾರರಾದರು.

### ಜನನ

1955: ಅಮೇರಿಕದ ಆಪಲ್ ಸಂಸ್ಥೆಯ ಸಹ ಸಂಸ್ಥಾಪಕ ಸ್ಟೀವ್ ಜಾಬ್ಸ್

1944: ಆಂಧ್ರಪ್ರದೇಶದ ಪ್ರಮುಖ ರಾಜಕಾರಣಿ ಮತ್ತು ಮಾಜಿ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು

1931: ಫ್ರೆಂಚ್ ಸಂಗೀತ ನಿರ್ದೇಶಕ ಮತ್ತು ಆಸ್ಕರ್ ಪ್ರಶಸ್ತಿ ವಿಜೇತ Michel Legrand

### ಮರಣ

2018: ಭಾರತೀಯ ಚಲನಚಿತ್ರರಂಗದ ಖ್ಯಾತ ನಟಿ ಶ್ರೀದೇವಿ

2003: ಇಟಲಿಯ ಖ್ಯಾತ ನಟ ಮತ್ತು ನಿರ್ದೇಶಕ ಆಲ್ಬರ್ಟ್ ಸೊಸಾಡಿ

1968: ಜರ್ಮನ್ ಮೂಲದ ಪ್ರಸಿದ್ಧ ಸಂಗೀತ ಸಂಯೋಜಕ Franz Waxman

# ಅನೇಕರ ಹೋರಾಟದಿಂದ ಸಮಾಜ ನಿರ್ಮಾಣ: ಸಾಹಿತಿ ಕಾಳೇಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಅಸ್ಪೃಶ್ಯತೆ, ಜಾತಿ ತಾರತಮ್ಯ, ಸ್ತ್ರೀ ಅಸಮಾನತೆ ವಿರುದ್ಧ ಪ್ರತಿ ಕಾಲಘಟ್ಟದಲ್ಲೂ ದಾರ್ಶನಿಕರು ಹೋರಾಟ ನಡೆಸಿದ್ದು, ಅದನ್ನು ಅರಿತು ಮುನ್ನಡೆಯಬೇಕಿದೆ ಎಂದು ಸಾಹಿತಿ ಡಾ. ಕಾಳೇಗೌಡ ನಾಗಾವರ ಹೇಳಿದರು.

ನಗರದ ಎಂ.ಜಿ.ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಮೂರು ಪುಸ್ತಕಗಳ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಲೋಹಿಯಾ, ಪೆರಿಯಾರ್, ಡಾ.ಬಿ.ಆರ್. ಅಂಬೇಡ್ಕರ್, ಬಸವಣ್ಣ, ಮಹಾತ್ಮ ಗಾಂಧೀಜಿ, ಕೊಡಗಿನ ಗೌರಮ್ಮ ಹೀಗೆ ಅನೇಕರು ತಮ್ಮದೇಯಾದ ಹೋರಾಟದ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಮಹಾತ್ಮ ಗಾಂಧೀಜಿ ಆಮರಣಾಂತ ಉಪವಾಸ ಕೈಗೊಂಡಿದ್ದಾಗ ಸತ್ಯಾಗ್ರಹ ವಾಪಾಸ್ ಪಡೆಯದಿದ್ದರೆ ಹಿಂದುಳಿದ ಸಮಾಜ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆಂದು ಡಾ.ಬಿ.ಆರ್. ಅಂಬೇಡ್ಕರ್ ಹೇಳಿದಾಗ ಗಾಂಧೀಜಿ ಅವರು, ನಾನು ಹಿಂದುಳಿದವರ ದತ್ತು ಮಗ ಅವರ ಕಷ್ಟಗಳೆಲ್ಲಾ ಗೊತ್ತು ಎಂದಿದ್ದರು. ಅದಕ್ಕೆ ಅಂಬೇಡ್ಕರ್ ಅವರು, ನೀವು ದತ್ತು ಮಗ ಮಾತ್ರ ನಾನು ಮನೆ ಮಗ ಎಂದು ಗಾಂಧೀಜಿ ಅವರ ಮನವೊಲಿಸಿದ್ದರು. ಅದೇ ರೀತಿ ಕೊಡಗಿನ ಗೌರಮ್ಮ ಗಾಂಧೀಜಿಗೆ ವೇದಿಕೆಯಿಂದ ಕೆಳಗಿಳಿದು ಹೋರಾಡಿ ಎಂದು ಸಲಹೆ ನೀಡಿದ್ದರು. ಇದೇ ರೀತಿ ಅನೇಕ ನಿದರ್ಶನಗಳು ನಮ್ಮ ನಡುವೆ ಇದ್ದು ಇತಿಹಾಸವನ್ನು ಯುವ ಸಮಾಜ ಅರಿಯಬೇಕೆಂದರು. ರಾಜ್ಯದ ಪ್ರತಿ ಜಿಲ್ಲೆಗೂ ತನ್ನದೇಯಾದ ವೈಶಿಷ್ಟ್ಯವಿದೆ. ಪತ್ರಕರ್ತ ಉದಯರವಿ ಅವರು ಹಾಸನ ಜಿಲ್ಲಾ ವೈಶಿಷ್ಟ್ಯ ಎಂಬ ಪುಸ್ತಕ ಬರೆದಿದ್ದು ಸಂಗ್ರಹ ಯೋಗ್ಯವಾಗಿದೆ. ಹಾಸನ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯ, ಕಲೆ, ಕ್ರೀಡೆ, ಪತ್ರಿಕೋದ್ಯಮ ಹೀಗೆ ನಾನಾ ಕ್ಷೇತ್ರಗಳಲ್ಲಿ ಜಿಲ್ಲೆ ಗುರುತರ ಸಾಧನೆ ಮಾಡಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ.ಎಸ್.ಎಲ್.ಭೈರಪ್ಪ, ಎಸ್.ಕೆ.ಕರೀಂಖಾನ್‌ರಂತಹ ಸಾಹಿತಿಗಳು ಹುಟ್ಟಿರುವ ಶ್ರೇಷ್ಠ ಜಿಲ್ಲೆ ಇದಾಗಿದೆಯೆಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ಉದಯರವಿ ಮತ್ತು ನಾನು ಬಾಲ್ಯದ ಗೆಳೆಯರು. ಅವರ ಜೀವನದ ಏಳುಬೀಳುಗಳಲ್ಲಿ ನಾನು ಸಾಕ್ಷಿಯಾಗಿದ್ದೇನೆ. ಪತ್ರಕರ್ತರಾಗಿ ಸದಾ ಬರವಣಿಗೆಯಲ್ಲಿ ತೊಡಗಿರುವ ಅವರ ಸಾಹಿತ್ಯ ಕೃಷಿ ಹೀಗೆ ಮುಂದುವರಿಯಲಿ ಎಂದು ಶುಭ ಹಾರೈಸಿದರು.

ಹಾಸನ ಜಿಲ್ಲಾ ವೈಶಿಷ್ಟ್ಯ ಕೃತಿ ಕುರಿತು ಕನ್ನಡ ಪ್ರಾಧ್ಯಾಪಕ ಡಾ.ಜಯಶಂಕರ ಹಲಗೂರು ಮಾತನಾಡಿ, ಯಾವ ಜಿಲ್ಲೆಯಾದರೂ ಅದಕ್ಕೆ ತನ್ನದೇಯಾದ ವೈಶಿಷ್ಟ್ಯತೆ ಇರುತ್ತದೆ. ಅದನ್ನು ಬಹಳ ಸೊಗಸಾಗಿ ಉದಯರವಿ ಅವರು ಪುಸ್ತಕ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಭವಿಷ್ಯದ ಪೀಳಿಗೆಗೆ ಆಕರ ಗ್ರಂಥವಾಗಲಿದೆ. ಜಿಲ್ಲೆಯ ಇತಿಹಾಸ, ಸಂಸ್ಕೃತಿ, ರಾಜಕೀಯವನ್ನು ಸೂಕ್ಷ್ಮವಾಗಿ ತಿಳಿಸಿಕೊಡುವ ಅತ್ಯುತ್ತಮ ಕೃತಿ ಇದಾಗಿದೆಯೆಂದರು. ಇತ್ತೀಚಿನ ದಿನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲೂ ರಾಜಕೀಯ ಮುನ್ನಲೆಗೆ ಬಂದು ಸಾಂಸ್ಕೃತಿಕ ಚಟುವಟಿಕೆ ತೆರೆಮರೆಗೆ ಸರಿಯುತ್ತಿದೆ. ಮನುಷ್ಯನ ಅಸ್ತಿತ್ವ ಕಂಡುಬರುವುದು ಸಾಂಸ್ಕೃತಿಕ ಪ್ರಭಾವದಿಂದ ಎಂಬುದು ಸತ್ಯ. ಆದರೆ ಅದಕ್ಕೆ ಪ್ರೋತ್ಸಾಹ ಸಿಗುತ್ತಿಲ್ಲ. ಸಾಂಸ್ಕೃತಿಕ ಒರತೆಗಳು ಜನಮಾನಸದಲ್ಲಿ ಯಾವಾಗಲೂ ಇರಬೇಕೆಂದು ಪ್ರತಿಪಾದಿಸಿದರು.

ಸಾಹಿತಿ ಕೃಷ್ಣಹಾನುಬಾಳು ಅವರ ಬರೆದ ಏಳು ಬೀಳಿನ ಹಾದಿಯಲ್ಲಿ ಕೃತಿ ಕುರಿತು ಸಾಹಿತಿ ಡಾ.ರಾಮಲಿಂಗೇಶ್ವರ ಮತ್ತು ಜಯಂತಿ ಚಂದ್ರಶೇಖರ್ ಅವರ ನಿರ್ಲಿಪ್ತ ಕಾದಂಬರಿ ಕುರಿತು ಪತ್ರಕರ್ತ ಕೆ.ಆರ್.ನೀಲಕಂಠ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಉದಯರವಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಜಾನಪದ ವಿದ್ವಾಂಸ ಚಂದ್ರು ಕಾಳೇನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಹಿಮ್ಸ್ ಪ್ರಾಂಶುಪಾಲ ಡಾ. ಬಿ.ಸಿ.ರವಿಕುಮಾರ್ ಮತ್ತಿತರರಿದ್ದರು.

# ಫೆ. 28ಕ್ಕೆ ಬೆಂಗಳೂರಿನಲ್ಲಿ ಶೈಕ್ಷಣಿಕ ಕಾರ್ಯಾಗಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು 55 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಫೆ.28 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ, ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗೂ ಗುರುವಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ ನಾಯಕರಹಳ್ಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ, ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಇಲಾಖೆಯ ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ವಿ.ಜಿ.ದ್ಯಾವೇಗೌಡ ಮಾತನಾಡಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಸರ್ಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ತತ್ವದೊಂದಿಗೆ ಸಾಗುತ್ತಿರುವ ಈ ಸಂಘಟನೆ ದೇಶದ ಮಾದರಿ ಶಿಕ್ಷಕರ ಸಂಘಟನೆಗಳಲ್ಲೊಂದು ಎಂದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಡಿ.ಎನ್.ರವಿ, ಗೌರವಾಧ್ಯಕ್ಷ ಕೆ.ಮಂಜೇಗೌಡ, ಪ್ರಧಾನ ಕಾರ್ಯದರ್ಶಿ ಗಾಯತ್ರಮ್ಮ, ಸಹ ಕಾರ್ಯದರ್ಶಿಗಳಾದ ಎ.ಜೆ.ಲೋಕೇಶ್, ಬಿ.ಎನ್.ಜಯಂತಿ, ನಿರ್ದೇಶಕ ಮಂಜಪ್ಪ, ಜಿಲ್ಲಾ ನಿರ್ದೇಶಕ ಡಿ.ಕೆ.ಅಶೋಕ್ ಕುಮಾರ್ ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248